

# ತ್ಯಾಜ್ಯ ವಿಂಗಡಣೆಗೆ ಯಂತ್ರ

## ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ ಮುಂದೆ ಇಟ್ಟ ಉತ್ತರ ಕನ್ನಡ

ಸ್ವಚ್ಛ ಭಾರತದ ಸಾಕಾರಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಪರಿಣಾಮಕಾರಿ ಹಾಗೂ ನವನವೀನ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಹಸಿ ಕಸದ ಸಮಗ್ರ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಮನೆ-ಮನೆಯಲ್ಲೂ ಕಾಂಪೋಸ್ಟ್ ಅಳವಡಿಸುವ ಮೂಲಕ ರಾಜ್ಯದ ಗಮನ ಸೆಳೆದಿದ್ದ ಕರಾವಳಿ ಜಿಲ್ಲೆಯಲ್ಲಿ, ತ್ಯಾಜ್ಯ ವಿಂಗಡಣೆ ಕೆಲಸಕ್ಕೆ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಆ ಮೂಲಕ ತ್ಯಾಜ್ಯ ನಿರ್ವಹಣೆಗೆ ಒತ್ತು ಕೊಟ್ಟು ಆ ಕೆಲಸಕ್ಕೆ ಇನ್ನಷ್ಟು ವೇಗ ನೀಡುವುದು ಸದ್ಯದ ಆದ್ಯತೆ. ಇದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮರ್ಪಕವಾಗಿ ಮಾಡಲಾಗುತ್ತಿದೆ.


ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಂಗ್ರಹಗೊಳ್ಳುವ ಕಸದ ನಿರ್ವಹಣೆಗೆ ಜಿಲ್ಲಾ ಪಂಚಾಯಿತಿಯು ಈ ಹಿಂದೆಯೇ ಕಸ ಸಂಗ್ರಹ ಘಟಕಗಳನ್ನು ಆರಂಭಿಸಿತ್ತು. ಕಸವನ್ನು ಪ್ರತ್ಯೇಕಿಸಿ ಸಮಗ್ರ ನಿರ್ವಹಣೆಗಾಗಿ ಒಂದು ಹೆಜ್ಜೆ ಮುಂದಿಟ್ಟಿರುವ ಜಿಲ್ಲಾಡಳಿತವು, ಪಿಡಬ್ಲ್ಯುಎಂ (PWM) ಘಟಕಗಳನ್ನು ಆರಂಭಿಸಿದೆ. ಅಂದರೆ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಘಟಕ. ಮಾನವ ಶ್ರಮಕ್ಕೆ ಪರ್ಯಾಯವಾಗಿ ಯಂತ್ರಗಳು ತ್ಯಾಜ್ಯವನ್ನು ಪ್ರತ್ಯೇಕಿಸಲು ನೆರವಾಗುವ ಘಟಕವಿದು. SBM-G ಯೋಜನೆಯಡಿ ಜಿಲ್ಲೆಯ 8 ಗ್ರಾಮ ಪಂಚಾಯಿತಿ ವ್ಯಾಪ್ತಿಯ ತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಸದ್ಯ ಪ್ರಾಯೋಗಿಕವಾಗಿ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಇದರೊಂದಿಗೆ ಸ್ವಚ್ಛತಾ ಸಿಬ್ಬಂದಿಯ ಶ್ರಮ ಉಳಿತಾಯವಾಗುವುದಲ್ಲದೆ, ತ್ಯಾಜ್ಯ ವಿಂಗಡಣೆ ಕೆಲಸ ಸುಲಭವಾಗುತ್ತದೆ.

## ಯಂತ್ರದ ಬಳಕೆಯಿಂದ ಇಷ್ಟೆಲ್ಲಾ ಲಾಭ

ಈ ಯಂತ್ರಗಳು ಪ್ಲಾಸ್ಟಿಕ್ ತ್ಯಾಜ್ಯವನ್ನುವಿವಿಧ ವರ್ಗಗಳಲ್ಲಿ ವಿಂಗಡಿಸುವುದು ಮಾತ್ರವಲ್ಲದೆ, ಅದನ್ನು ಅಚ್ಚುಕಟ್ಟಾಗಿ ಮೂಟೆ ಕಟ್ಟುತ್ತವೆ. ಹೀಗಾಗಿ ತ್ಯಾಜ್ಯ ವಿಂಗಡಣಾ ಯಂತ್ರಗಳು ಸ್ವಚ್ಛತಾ ಸಿಬ್ಬಂದಿಯ ಶ್ರಮವನ್ನು ಉಳಿಸುವ ಜೊತೆಗೆ ಸಮಯದ ಉಳಿತಾಯಕ್ಕೂ ನೆರವಾಗುತ್ತಿವೆ. ಹಿಂದೆಲ್ಲಾ ಮನೆ ಮನೆಯಿಂದ ಗ್ರಾಮ ಪಂಚಾಯಿತಿಗಳ ಮೂಲಕ ಸಂಗ್ರಹಿಸಲಾದ ತ್ಯಾಜ್ಯವನ್ನು ತ್ಯಾಜ್ಯ ವಿಲೇವಾರಿ ಘಟಕದ ಸಿಬ್ಬಂದಿ ಪ್ರತ್ಯೇಕಿಸಬೇಕಿತ್ತು. ಈ ಪ್ರಕ್ರಿಯೆಗೆ ಹೆಚ್ಚು ಸಮಯ ವ್ಯರ್ಥವಾಗುತ್ತಿತ್ತು. ಇದೀಗ ಪಿಡಬ್ಲ್ಯುಎಂ ಘಟಕಗಳಲ್ಲಿ ಯಂತ್ರಗಳ ನೆರವಿಂದ ನಿತ್ಯ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯವನ್ನು ವಿಂಗಡಣೆ ಮಾಡಬಹುದಾಗಿದೆ. ಅದು ಕೂಡಾ ಗಂಟೆಗಟ್ಟಲೆ ಸಮಯ ಹಿಡಿಯುತ್ತಿದ್ದ ಕೆಲಸಕ್ಕೆ ಈಗ ಕೆಲವೇ ನಿಮಿಷಗಳು ಸಾಕಾಗುತ್ತಿವೆ. ಈ ಘಟಕದಲ್ಲಿ ಪ್ರತಿನಿತ್ಯ ಗರಿಷ್ಠ 1ರಿಂದ 2 ಟನ್‌ವರೆಗೂ ಕಸ ವಿಂಗಡಣೆ ಮಾಡಲು ಸಾಧ್ಯವಿದೆ ಎಂಬುದು ವಿಶೇಷ.

## ಪಿಡಬ್ಲ್ಯುಎಂ ಘಟಕಗಳಲ್ಲಿ ಏನೇನಿರುತ್ತವೆ?

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಘಟಕಗಳಲ್ಲಿ ವಿವಿಧ ವಿಭಾಗಗಳಿರುತ್ತವೆ. ಪ್ರತ್ಯೇಕ ಯಂತ್ರಗಳು ವಿವಿಧ ಕೆಲಸಗಳನ್ನು ಮಾಡುತ್ತವೆ. ಘಟಕಕ್ಕೆ ಬರುವ ತ್ಯಾಜ್ಯವನ್ನು ತೂಕ ಮಾಡುವ ಯಂತ್ರವು, ಕಸದ ಭಾರವನ್ನು ಲೆಕ್ಕ ಹಾಕುತ್ತದೆ. ತ್ಯಾಜ್ಯದ ರಾಶಿಯಿಂದ ನಿರ್ದಿಷ್ಟ ಕಸವನ್ನು ಎಳೆದು ತರುವ ಯಂತ್ರ ಕೂಡಾ ಇರುತ್ತದೆ. ಇದರೊಂದಿಗೆ ತ್ಯಾಜ್ಯವನ್ನು ವಿಂಗಡಿಸಲು ಕಸವನ್ನು ಮುಂದೆ ಸಾಗಿಸುವ ಬೆಲ್ಟ್ ರೀತಿಯ ಯಂತ್ರವೂ ಇದೆ. ಅಷ್ಟೇ ಅಲ್ಲ, ಪ್ಲಾಸ್ಟಿಕ್ ತ್ಯಾಜ್ಯವನ್ನು ವ್ಯವಸ್ಥಿತವಾಗಿ ಗಾತ್ರದಲ್ಲಿ ಕುಗ್ಗಿಸಿ ಮೂಟೆಕಟ್ಟುವ ವ್ಯವಸ್ಥೆಯೂ ಘಟಕದಲ್ಲಿರುತ್ತದೆ.



ಸದ್ಯ ಮೊದಲ ಹಂತದಲ್ಲಿ 8 ಕಡೆ ಪಿಡಬ್ಲ್ಯುಎಂ ಘಟಕ ಸ್ಥಾಪಿಸಲಾಗಿದೆ. ಜಿಲ್ಲಾ ಕೇಂದ್ರವಿರುವ ಕಾರವಾರ ತಾಲ್ಲೂಕಿನ ಚಿತ್ತಾಕುಲ, ಭಟ್ಕಳದ ಶಿರಾಲಿ, ಕುಮಟಾದ ನಾಡುಮಾಸ್ಕೇರಿ, ಅಂಕೋಲಾದ ಬೊಬ್ರುವಾಡ, ಹೊನ್ನಾವರದ ಚಂದಾವರ, ಯಲ್ಲಾಪುರದ ಉಮ್ಮಚಗಿ, ಮುಂಡಗೋಡಾದ ಪಾಳಾ, ಹಳಿಯಾಳದ ತೇರಗಾಂವ್ ಗ್ರಾಮ ಪಂಚಾಯಿತಿಯ ತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಘಟಕ ಅಳವಡಿಸಲಾಗಿದೆ.

ಕ್ರಮೇಣ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಿಗೂ ವಿಸ್ತರಣೆಯಾಗಲಿವೆ. ಇದರೊಂದಿಗೆ ಎರಡು ಕಡೆ ಎಂಆರ್‌ಎಫ್ ಕೇಂದ್ರಗಳ ಸ್ಥಾಪನೆಗೆ ಚಿಂತನೆ ನಡೆದಿದೆ. ಗ್ರಾಮ ಪಂಚಾಯಿತಿಗಳಲ್ಲಿ ಸಂಗ್ರಹವಾಗುವ ಕಸವನ್ನು ಎಂಆರ್‌ಎಫ್ ಘಟಕಗಳಿಗೆ ರವಾನಿಸಲಾಗುತ್ತದೆ. ಇಲ್ಲಿ ಸುಧಾರಿತ ಯಂತ್ರಗಳ ನೆರವಿಂದ ಆ ತ್ಯಾಜ್ಯದ ಮರುಬಳಕೆ ಮಾಡಲು ಅಗತ್ಯವಿರುವಂತೆ ಪುನರ್ವಿಂಗಡನೆ ಹಾಗೂ ಸಂಸ್ಕರಣೆ ಪ್ರಕ್ರಿಯೆ ನಡೆಯುತ್ತವೆ.

**ಉತ್ತರ ಕನ್ನಡ ಜಿಲ್ಲೆಯು ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ ಎಂಬ ಸ್ವಚ್ಛಭಾರತದ ಪರಿಕಲ್ಪನೆಯಂತೆ ವೇಗವಾಗಿ ಹೆಜ್ಜೆ ಇಡುತ್ತಿದೆ. ಮುಂದೆ ಜಿಲ್ಲಾದ್ಯಂತ ಪಿಡಬ್ಲ್ಯುಎಂ ಘಟಕಗಳ ಜೊತೆಗೆ ಎಂಆರ್ ಎಫ್ ಘಟಕಗಳನ್ನು ಸ್ಥಾಪಿಸಿ ಸಮಗ್ರ ತ್ಯಾಜ್ಯ ನಿರ್ವಹಣೆಯ ಗುರಿ ಇಟ್ಟುಕೊಳ್ಳಲಾಗಿದೆ.**